ಕರ್ನಾಟಕ ಸರ್ಕಾರ
**ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ.**
(ದೂರವಾಣಿ ಸಂಖ್ಯೆ: 08482-228366, ಫ್ಯಾಕ್ಸ್: 08482-240322)
ಅಂತರ್ಜಾಲ: *www.brims-bidar.in*

# 11ನೇ (ವಿಶೇಷ)ಆಡಳಿತ ಮಂಡಳಿ ಸಭೆಯ ನಡವಳಿಗಳು

ಸನ್ಮಾನ್ಯ ಶ್ರೀ.ಎಸ್.ಎ.ರಾಮದಾಸ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:24-05-2012 ರಂದು ಸಾಯಂಕಾಲ: 6.00 ಗಂಟೆಗೆ, ಮಾನ್ಯ ಸಚಿವರ ಕೊಠಡಿ ಸಂಖ್ಯೆ:406, ವಿಕಾಸಸೌಧ, ಬೆಂಗಳೂರಿನಲ್ಲಿ ನಡೆದ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 11ನೇ (ವಿಶೇಷ) ಆಡಳಿತ ಮಂಡಳಿ ಸಭೆಯ ನಡವಳಿಗಳು.

## ಸಭೆಯಲ್ಲಿ ಹಾಜರಿದ್ದವರು:

1. ಶ್ರೀ.ಎಸ್.ಎ.ರಾಮದಾಸ್ – ಅಧ್ಯಕ್ಷರು
   ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು
   ಹಾಗೂ ಬೀ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ
   ಗೌರವಾನ್ವಿತ ಅಧ್ಯಕ್ಷರು.

2. ಶ್ರೀಕೆ.ಹೆಚ್.ಗೋಪಾಲಕೃಷ್ಣೇ ಗೌಡ,ಭಾ.ಆ.ಸೇ – ಉಪಾಧ್ಯಕ್ಷರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
   (ವೈದ್ಯಕೀಯ ಶಿಕ್ಷಣ),
   ಬೆಂಗಳೂರು.

3. ಶ್ರೀಮತಿ.ವಿದ್ಯಾಕುಮಾರಿ ಕೆ.ಎ.ಎಸ್. – ಸದಸ್ಯರು
   ಉಪ ಕಾರ್ಯದರ್ಶಿಗಳು,
   ವೈದ್ಯಕೀಯ ಶಿಕ್ಷಣ,
   ಬೆಂಗಳೂರು

4. ಡಾ॥.ಜಿ.ಎಸ್.ವೆಂಕಟೇಶ, – ಸದಸ್ಯರು
   ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ,
   ಬೆಂಗಳೂರು.

ಕೆ.ಹೆಚ್. ಗೋಪಾಲಕೃಷ್ಣೇ ಗೌಡ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾ
(ವೈದ್ಯಕೀಯ ಶಿಕ್ಷಣ)

5. ಡಾ॥.ಕರೂರ.ಬಿ.ವಿ. – ಸದಸ್ಯರು
ಸಹ ನಿರ್ದೇಶಕರು
ಆರೋಗ್ಯ ಮತ್ತು ಕು.ಕ. ಸೇವೆಗಳು
ಆಯುಕ್ತರು, ಆರೊಗ್ಯ ಮತ್ತು ಕು.ಕ.ಸೇವೆಗಳು
ಬೆಂಗಳೂರು. ಇವರ ಪರವಾಗಿ

6. ಡಾ॥.ಎಸ್.ಮಣಿಮೇಗಳ – ಸದಸ್ಯರು
ಜಂಟಿ ನಿರ್ದೇಶಕರು (ಹೆಚ್.ಇ.ಟಿ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು
ಮಾನ್ಯ ಸರ್ಕಾರದ ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇವರ ಪರವಾಗಿ

7. ಶ್ರೀ.ಮೀರ್ ಅನೀಸ್ ಅಹ್ಮದ್, ಕೆ.ಎ.ಎಸ್. – ಸದಸ್ಯರು
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೀದರ.

8. ಶ್ರೀ.ಗುರುಗುಂಟೆ ಶಿವಶಂಕ್ರಪ್ಪ – ಸದಸ್ಯರು
ಅಧೀಕ್ಷಕ ಅಭಿಯಂತರರು,
ಪಿ.ಡಬ್ಲ್ಯೂ.ಡಿ. ಗುಲ್ಬರ್ಗಾ
(ಮುಖ್ಯ ಅಭಿಯಂತರರು, ಸಂಪರ್ಕ ಮತ್ತು
ಕಟ್ಟಡ, ಉತ್ತರ ವಲಯ ಲೋಕೋಪಯೋಗಿ
ಬಂದರು ಮತ್ತು ಒಳಜಲಸಾರಿಗೆ ಇಲಾಖೆ
ಧಾರವಾಡ ಇವರ ಪರವಾಗಿ)

9. ಡಾ॥. ರಜನೀಶ ವಾಲಿ – ಸದಸ್ಯರು
ನಾಮ ನಿರ್ದೇಶನ ಸದಸ್ಯರು,
ವೈದ್ಯಕೀಯ ಕ್ಷೇತ್ರ, ಬೀದರ.

10. ಡಾ॥.ಕಾಶಿನಾಥ್.ಬಿ.ಕಾಂಬಳೆ – ಸದಸ್ಯರು
ಪ್ರಭಾರಿ ವೈದ್ಯಕೀಯ ಅಧೀಕ್ಷಕರು,
ಬೀ.ವೈ.ವಿ.ಸಂ.ಬೋಧಕ ಆಸ್ಪತ್ರೆ, ಬೀದರ.

11. ಶ್ರೀ.ಜಗನ್ನಾಥ್ – ಸದಸ್ಯರು
ಪ್ರಭಾರಿ ಅರ್ಥಿಕ ಸಲಹೆಗಾರರು,
ಬಿ.ವೈ.ವಿ.ಸಂ.ಬೀದರ

ಕೆ.ಹೆಚ್. ಗೋಪಾಲಕೃಷ್ಣೇ ಗೌಡ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
[illegible] ಕುಟುಂಬ ಕಲ್ಯಾಣ [illegible]

12. ಶ್ರೀ.ಮಾಚಾ ಕಲ್ಲಪ್ಪ – ಸದಸ್ಯರು
ಪ್ರಭಾರಿ ಸಹಾಯಕ ಆಡಳಿತಾಧಿಕಾರಿಗಳು,
ಮುಖ್ಯ ಆಡಳಿತಾಧಿಕಾರಿಗಳು
ಬೀ.ವೈ.ವಿ.ಸಂ. ಬೀದರ ಇವರ ಪರವಾಗಿ

13. ಡಾ॥.ಬಿ.ಓ.ಹನುಮಂತಪ್ಪ – ಸದಸ್ಯ ಕಾರ್ಯದರ್ಶಿಗಳು
ನಿರ್ದೇಶಕರು
ಬೀ.ವೈ.ವಿ.ಸಂ.ಬೀದರ.

ಡಾ॥.ಬಿ.ಓ.ಹನುಮಂತಪ್ಪ, ನಿರ್ದೇಶಕರು, ಬೀ.ವೈ.ವಿ.ಸಂ.ಬೀದರ ಇವರು, ಉಪಸ್ಥಿತರಿದ್ದ ಸದಸ್ಯರುಗಳನ್ನು ಸ್ವಾಗತಿಸುತ್ತಾ ಸನ್ಮಾನ್ಯ ಸಚಿವರು, ವೈದ್ಯಕೀಯ ಶಿಕ್ಷಣ ಹಾಗೂ ಆಡಳಿತ ಮಂಡಳಿಯ ಅಧ್ಯಕ್ಷರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಲು ಕೋರಿದರು.

**ಕಾರ್ಯಸೂಚಿ-1: ದಿನಾಂಕ:03-1-2011ರಂದು ನಡೆದ 9ನೇ ಮತ್ತು ದಿನಾಂಕ:20-05-2011ರಂದು ನಡೆದ 10 ನೇ ಆಡಳಿತ ಮಂಡಳಿ ಸಭೆಯ ನಡವಳಿಗಳಿಗೆ ಅನುಪಾಲನಾ ವರದಿ ಓದಿ ಅಂಗೀಕರಿಸುವುದು.**

**ತೀರ್ಮಾನ:** **ದಿನಾಂಕ:03-1-2011ರಂದು ನಡೆದ** 9ನೇ ಮತ್ತು ದಿನಾಂಕ:20-05-2011ರಂದು ನಡೆದ 10 ನೇ ಆಡಳಿತ ಮಂಡಳಿ ಸಭೆಯ ನಡವಳಿಗಳಿಗೆ ಅನುಪಾಲನಾ ವರದಿ ಓದಿ ಅಂಗೀಕರಿಸರಿಸಲು ಕೋರಿದಾಗಿ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**ಕಾರ್ಯಸೂಚಿ-2: ದಿನಾಂಕ:14-03-2012ರಂದು ನಡೆದ 5ನೇ ಅರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಬಗ್ಗೆ.**

**ತೀರ್ಮಾನ:** ದಿನಾಂಕ:14-03-2012ರಂದು ನಡೆದ 5ನೇ ಅರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಸಭೆಯಲ್ಲಿ ಮಂಡಿಸಿದಾಗ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ-3: ರಾಜ್ಯದ ಎಲ್ಲಾ ಸ್ವಾಯತ್ತ ಸಂಸ್ಥೆಗಳಿಗೆ ಏಕರೂಪ ಬೈ-ಲಾ (Common By-Law) ರೂಪಿಸಿ ಅಳವಡಿಸುವ ಬಗ್ಗೆ:**

**ತೀರ್ಮಾನ:** ರಾಜ್ಯದ ಎಲ್ಲಾ ಸ್ವಾಯತ್ತ ಸಂಸ್ಥೆಗಳಿಗೆ ಏಕರೂಪ ಬೈ-ಲಾ (Common By-Law) ರೂಪಿಸಿ ಅಳವಡಿಸಿಕೊಳ್ಳಲು ಸಭೆಯಲ್ಲಿ ಕೋರಿದಾಗ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಸಂಸ್ಥೆಯ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು 15ದಿನಗಳ ಒಳಗಾಗಿ ಬೈ-ಲಾವನ್ನು ನೊಂದಣಿ ಮಾಡಲು ನಿರ್ದೇಶಕರಿಗೆ ಸೂಚಿಸಲಾಯಿತು.

ಡಿ.ಜಿ.ಗೋಪಾಲಕೃಷ್ಣೇ ಗೌಡ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಕಾರ್ಯಸೂಚಿ-4: ಬ್ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಜನರಿಕ ಔಷಧಿ ಮಳಿಗೆ (Generic Drug Store)ಯನ್ನು ಪ್ರಾರಂಭಿಸುವ / ಸ್ಥಾಪಿಸುವ ಬಗ್ಗೆ.**

**ತೀರ್ಮಾನ:** ಬ್ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಜನರಿಕ ಔಷಧಿ ಮಳಿಗೆ (Generic Drug Store)ಯನ್ನು ಪ್ರಾರಂಭಿಸುವ / ಸ್ಥಾಪಿಸಲು ಸಭೆಯಲ್ಲಿ ಮಂಡಿಸಿದಾಗ ಸಭೆಯು Managing Director, Karnataka State Co-oprative Consumers Federation Ltd., Bangalore ಇವರೊಂದಿಗೆ 25 ವರ್ಷಗಳಿಗೆ ಲೀಜ್ ಮಾಡಿಕೊಂಡ ಒಡಬಂಡಿಕೆಗೆ ಘಟನ್ನೋತ್ತರ ಅನುಮೋದನೆ ನೀಡಿತು.

**ಕಾರ್ಯಸೂಚಿ-5: ದಿನಾಂಕ 03-01-2011ರ ನಂತರ ನೇಮಕ ಮಾಡಿದ ಬೋಧಕ ಸಿಬ್ಬಂದಿಗಳನ್ನು ನೇರ ಸಂದರ್ಶನ (Walk-in-interview) ಹಾಗೂ ಅಮಂತ್ರಣದ (Invitation) ಮುಖಾಂತರ ಮಾಡಿದ ಪಟ್ಟಿಗಳಿಗೆ ಹಾಗೂ ರಾಜೀನಾಮೆ ಪಟ್ಟಿಗೆ ಅನುಮೋದನೆ ನೀಡುವ ಕುರಿತು.**

**ತೀರ್ಮಾನ:**

1. ದಿನಾಂಕ 21-03-2011, 22-08-2011, 30-11-2011 ಹಾಗೂ 03-01-2012ರಂದು ನಡೆದೆ ನೇರ ಸಂದರ್ಶನದ ಮೂಲಕ ನೇಮಕ ಮಾಡಿದ ಬೋಧಕ ಸಿಬ್ಬಂದಿಗಳನ್ನು (Walk-in-interview) ನೇಮಕ ಮಾಡಿದಕ್ಕೆ ಸಭೆಯು ಅನುಮೋದನೆ ನೀಡಿತು.
2. ಅಮಂತ್ರಣದ (Invitation) ಮುಖಾಂತರ ಮಾಡಿದ ಪಟ್ಟಿಗಳಿಗೆ ಅನುಮೋದನೆ ನೀಡುವಂತೆ ಸಭೆಯಲ್ಲಿ ಕೋರಿದಾಗ ಅಭ್ಯರ್ಥಿಗಳನ್ನು ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಂಡು ಮುಂದಿನ ಆಡಳಿತ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆಯಲು ತಿಳಿಸಿ. ಇಲ್ಲಿ ಸೂಚಿಸಿರುವ 24 ಹುದ್ದೆಗಳನ್ನು ಸಂದರ್ಶನ (Walk-in-interview) ಮೂಲಕ ಕರೆದು ಕಾನೂನಿನಂತೆ ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಲಾಯಿತು. ಹಾಗೂ ನೇರ ನೇಮಕಾತಿ ಪ್ರಕ್ರೀಯೆ ಪ್ರಾರಂಭಿಸಲು ತಿಳಿಸಿರುವುದರಿಂದ ಅಮಂತ್ರಣ ಪಟ್ಟಿಯಲ್ಲಿರುವ ಬೋಧಕ ಸಿಬ್ಬಂಧಿಯವರನ್ನು ತಾತ್ಕಾಲಿಕ ನೇಮಕಾತಿಯನ್ನು ಅನುಮೋದಿಸಲು ತರವಲ್ಲವೆಂದು ಸಭೆಯು ತೀರ್ಮಾನಿಸಿತು.
3. ಬೋಧಕ ಸಿಬ್ಬಂದಿಯವರು ಸಲ್ಲಿಸಿರುವ ರಾಜಿನಾಮೆಯನ್ನು ಅಂಗೀಕರಿಸಿದ ಸಂಸ್ಥೆಯ ಮುಖ್ಯಸ್ಥರು ತೆಗೆದುಕೊಂಡ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಿತು .

**ಕಾರ್ಯಸೂಚಿ-6: ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ ಅರ್ಹ ಬೋಧಕ ಸಿಬ್ಬಂಧಿಯ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ.**

**ತೀರ್ಮಾನ:** ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ ಅರ್ಹ ಬೋಧಖ ಸಿಬ್ಬಂಧಿಯ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸಲು ಸಭೆಯಲ್ಲಿ ಮಂಡಿಸಿದಾಗ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅರ್ಹ ಬೋಧಕ ಸಿಬ್ಬಂಧಿಯವರ ಖಾಯಂ ಪೂರ್ವ

ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದಿಂದ ಅನುಮೋದನೆ ಪಡೆದನಂತರ ಘಟನೋತ್ತರ ಅನುಮೋದನೆ ಸಲ್ಲಿಸಲು ಸೂಚಿಸಲಾಯಿತು.

**<u>ಕಾರ್ಯಸೂಚಿ–7:</u> ಡಾ॥ನಿತೀನ ಕುಮಾರ ಮರಾಠೆ ಕರ್ತವ್ಯ ನಿರತ ವೈದ್ಯಾಧಿಕಾರಿಗಳು, ಇವರಿಗೆ ಅಸಾಧಾರಣ / ವೇತನ ತಹಿತ ರಜೆ ಮಂಜೂರು ಮಾಡುವ ಬಗ್ಗೆ ಹಾಗೂ ಬ್ಯಾಂಕ್ ಗ್ಯಾರಂಟಿಯಿಂದ ವಿನಾಯಿತಿ ನೀಡುವ ಬಗ್ಗೆ.**

<u>ತೀರ್ಮಾನ:</u> ಡಾ॥ ನಿತೀನಕುಮಾರ ಮರಾಠೆ, ಕರ್ತವ್ಯ ನಿರತ ವೈದ್ಯಾಧಿಕಾರಿಗಳು ದಿ:30/07/2011ರಂದು ಈ ಸಂಸ್ಥೆಗೆ ಅರ್ಜಿ ಸಲ್ಲಿಸಿ, ಮೂರು (3) ವರ್ಷ ಸ್ನಾತ್ತಕೋತ್ತರ ಪದವಿ, ಎಂ.ಡಿ. ಆಸ್ಪತ್ರೆ ಆಡಳಿತ ಕೋರ್ಸ ವ್ಯಾಸಂಗಕ್ಕಾಗಿ ವೇತನ ರಹಿತ ರಜೆ (ಅಸಾಧಾರಣ ರಜೆ) ಹಾಗೂ ಬ್ಯಾಂಕ್ ಗ್ಯಾರಂಟಿಯಿಂದ ಸಡಿಲಿಕೆಗೊಳಿಸುವ ಕೋರಿಕೆ ಅರ್ಜಿ ಸಲ್ಲಿಸಿರುತ್ತಾರೆಂದು ಸಭೆಯಲ್ಲಿ ಮಂಡಿಸಿದಾಗ. ಸದರಿಯವರ ಖಾಯಂ ಪೂರ್ವ ಸೇವಾವಧಿಯು ಘೋಷಣೆಯಾಗದೆ ಇರುವುದರಿಂದ ಹಾಗೂ ಅಪ್ಪಣೆ ಇಲ್ಲದೆ ಸ್ನಾತ್ತಕೋತ್ತರ ಪದವಿ ವ್ಯಾಸಂಗಕ್ಕೆ ಹೊಗಿರುವುದಿಂದ ಸದರಿಯವರನ್ನು ನೌಕರಿಯಿಂದ ವಜಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ಕಾರ್ಯಸೂಚಿ–8:</u> ಡಾ॥ರಾಜಕುಮಾರ ಜಿ.ಬಿ. ಸೀನಿಯರ ರೆಸಿಡೆಂಟ್, ಮಕ್ಕಳ ವಿಭಾಗ ಇವರಿಗೆ ಅಸಾಧಾರಣ / ವೇತನ ರಹಿತ ರಜೆ ಮಂಜೂರು ಮಾಡುವ ಬಗ್ಗೆ.**

<u>ತೀರ್ಮಾನ:</u> ಡಾ॥ ರಾಜಕುಮಾರ ಜಿ.ಬಿ. ಇವರು ದಿನಾಂಕ 16/04/2008ರಂದು ಸಿನಿಯರ್ ರೆಸಿಡೆಂಟಾಗಿ, ಮಕ್ಕಳ ವಿಭಾಗದಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಇವರ ಖಾಯಂಪೂರ್ವ ಅವಧಿ ಘೋಷಣೆಯಾಗಿರುವುದಿಲ್ಲ. ಸದರಿ ವೈದ್ಯರು ಮೂರು ವರ್ಷಗಳ ಸ್ನಾತ್ತಕೋತ್ತರ ಅರವಳಿಕೆ, ದಿನಾಂಕ 05/05/2010 ರಿಂದ 04/06/2013ರ ವರೆಗೆ ಅಸಾಧಾರಣ ರಜೆ (ವೇತನ ರಹಿತ ರಜೆ) ನೀಡುವ ಕುರಿತು ದಿನಾಂಕ 08/06/2010ರಂದು ಅರ್ಜಿ ಸಲ್ಲಿಸಿರುತ್ತಾರೆಂದು ಸಭೆಯಲ್ಲಿ ಮಂಡಿಸಿದಾಗ. ಸದರಿಯವರ ಖಾಯಂ ಪೂರ್ವ ಸೇವಾವಧಿಯು ಘೋಷಣೆಯಾಗದೆ ಇರುವುದರಿಂದ ಹಾಗೂ ಅಪ್ಪಣೆ ಇಲ್ಲದೆ ಸ್ನಾತ್ತಕೋತ್ತರ ಪದವಿ ವ್ಯಾಸಂಗಕ್ಕೆ ಹೊಗಿರುವುದಿಂದ ಅನುಮತಿ ನೀಡಲು ಬರುವುದಿಲ್ಲವೆಂದು ಸದರಿಯವರನ್ನು ನೌಕರಿಯಿಂದ ವಜಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ಕಾರ್ಯಸೂಚಿ–9:</u> ಡಾ॥ಬಸವೇಶ್ವರ.ಎಂ. ಸೀನಿಯರ್ ರೆಸಿಡೆಂಟ್ ವೈದ್ಯಕೀಯ ವಿಭಾಗ ಇವ ರಿಗೆ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ನಿಯೋಜನೆ ಮಾಡುವ ಬಗ್ಗೆ.**

<u>ತೀರ್ಮಾನ:</u> ಡಾ॥ಬಸವೇಶ್ವರ.ಎಂ. ಸೀನಿಯರ್ ರೆಸಿಡೆಂಟ್ ವೈದ್ಯಕೀಯ ವಿಭಾಗ ಇವರಿಗೆ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ನಿಯೋಜನೆ ಮಾಡಲು ಸಭೆಯಲ್ಲಿ ಮಂಡಿಸಿದಾಗ ಸದರಿಯವರನ್ನು ಸ್ನಾತ್ತಕೋತ್ತರ ವ್ಯಾಸಂಗಕ್ಕಾಗಿ ನಿಯೋಜನೆ ಮಾಡಲು ಸಭೆಯು ತೀರ್ಮಾನಿಸುತ್ತಾ ಸದರಿಯವರು ಸ್ನಾತಕೋತರ ಅವಧಿ ಮುಗಿಸಿದ ನಂತರ ಈ ಸಂಸ್ಥೆಯಲ್ಲಿ 10 ವರ್ಷ ಕೆಲಸಮಾಡಬೆಕೇಂಬ ಷರತ್ತಗೆ ಅನುಮೋದಿಸಲಾಯಿತು.

ಕೆ.ಹೆಚ್. ಗೋಪಾಲಕೃಷ್ಣೇ ಗೌಡ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
... ಮತ್ತು ಕುಟುಂಬ ಕಲ್ಯಾಣ ಇಲಾ...

ಹಾಗೂ ಸದರಿಯವರು ಸ್ನಾತಕೋತ್ತರ ವ್ಯಾಸಂಗ ಮುಗಿದ ನಂತರ ಸಂಸ್ಥೆಯಲ್ಲಿ ಸೇವೆಸಲ್ಲಿಸದಿದ್ದಲ್ಲಿ / ಕೆಲಸಕ್ಕೆ ಬರದೆ ಇದ್ದಲ್ಲಿ ರೂ.25.00 ಲಕ್ಷ ದಂಡ ವಿಧಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**<u>ಕಾರ್ಯಸೂಚಿ–10:</u> ಶ್ರೀ.ಶಶಿಕಾಂತ ಸ್ಟ್ಯಾಟಿಷಿಯನ್ ಕಮ್ ಅಸಿಸ್ಟೆಂಟ್ ಲೇಕ್ಚರರ್ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ ಇವರ ಹುದ್ದೆ ಬದಲಾವಣೆ ಕುರಿತು.**

<u>ತೀರ್ಮಾನ:</u> ಶ್ರೀ.ಶಶಿಕಾಂತ ಸ್ಟ್ಯಾಟಿಷಿಯನ್ ಕಮ್ ಅಸಿಸ್ಟೆಂಟ್ ಲೇಕ್ಚರರ್ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ ಇವರ ಹುದ್ದೆ ಬದಲಾವಣೆ ಮಾಡಲು ಸಭೆಯಲ್ಲಿ ಮಂಡಿಸಿದಾಗ ಸಭೆಯು ಸದರಿಯವರಿಗೆ ಹುದ್ದೆ ಬದಲಾವಣೆ ಮಾಡಿ ಉಪನ್ಯಾಸಕರು / ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯನ್ನು ನೀಡಲು ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**<u>ಕಾರ್ಯಸೂಚಿ–11:</u> ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭಾರತೀಯ ವೈದ್ಯಕೀಯ ಪರಿಷತ್ತು ಷರತ್ತುಬದ್ಧ ಮಾನ್ಯತೆ ನೀಡಿರುವ ಬಗ್ಗೆ.**

<u>ತೀರ್ಮಾನ:</u> ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭಾರತೀಯ ವೈದ್ಯಕೀಯ ಪರಿಷತ್ತು ಷರತ್ತುಬದ್ಧ ಮಾನ್ಯತೆ ನೀಡಿರುವಂತೆ ಹಾಗೂ ಭಾರತಿಯ ವೈದ್ಯಕೀಯ ಪರಿಷತ್ತು ಗುರುತಿಸಿರುವ ಬೋಧಕ ಸಿಬ್ಬಂಧಿಗಳ ಕೊರತೆ ಉಪಕರಣಗಳು ಮೂಲಭೂತ ಸೌಕರ್ಯಗಳನ್ನು ಪೂರೈಸಲು ಕ್ರಮಕೈಗೊಳ್ಳಲು ಅನುಮತಿಸಬೇಕೆಂದು ಸಭೆಯಲ್ಲಿ ಮಂಡಿಸಿದಾಗ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ಮುಂದುವರೆದು ಮಾನ್ಯ ಸಚಿವರು ಹಾಗೂ ಅಧ್ಯಕ್ಷರು, ಸಂಸ್ಥೆಯ ನಿರ್ದೇಶಕರಿಗೆ ಈ ಕೆಳಕಂಡಂತೆ ಕ್ರಮಕೈಗೊಳ್ಳಲು ನಿರ್ದೇಶಿಸಿದರು:–

1) ದಿನಾಂಕ: 24–05–2012ರಿಂದ ಜಾರಿಗೆ ಬರುವಂತೆ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಜಾಬ್ ಚಾರ್ಟ್ ನೀಡಲು ಹಾಗೂ ಪ್ರತಿ ತಿಂಗಳು ಕೋನೆಯ ದಿನದಂದು ಅವರು ಕಾರ್ಯನಿರ್ವಹಿಸಿದ ಬಗ್ಗೆ ವರದಿಯನ್ನು ನಿರ್ದೇಶಕರ ಕಛೇರಿಗೆ ಸಲ್ಲಿಸಲು ಕ್ರಮಕೈಗೊಳ್ಳುವುದು. ಹಾಗೂ ಸಂಸ್ಥೆಯ ನಿರ್ದೇಶಕರು ಪ್ರತಿ ತಿಂಗಳು 5ನೇ ತಾರಿಖಿನಂದು ಸಿಬ್ಬಂದಿಯವರು ತಮ್ಮ ಜಾವಾಬ್ದರಿಯನ್ನು ಹೆಗ್ಗೆ ನಿರ್ವಾಹಿಸಿದರೆಂದು ವಿವರವಾದ ಮಾಹಿತಿಯನ್ನು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಕಛೇರಿಗೆ ಸಲ್ಲಿಸಲು ಸೂಚಿಸಿದರು.
2) ಬ್ರೀಮ್ಸ್ ಬೀದರ ಸಿಬ್ಬಂಧಿಗೆ ಬಯೋಮೇಟ್ರಿಕ್ ಹಾಜರಾತಿಯನ್ನು ಹಾಗೂ Job chart ನೊಂದಿಗೆ ತಾಳೆಮಾಡಿ ಪ್ರತಿ ತಿಂಗಳು 5ನೇ ದಿನಾಂಕದೊಳಗಾಗಿ ಷರದೊಂದಿಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು.
3) ಯಾವ ತಿಂಗಳ ಯಾವ ಯಾವ ಸಿಬ್ಬಂದಿಯವರು ಕರ್ತವ್ಯ ನಿರ್ವಹಣೆ ವರದಿ ಬಂದಿರುವುದಿಲ್ಲವೊ (ಬಯೋ ಮೇಟ್ರಿಕ್ ಹಾಜರಾತಿ ಮತ್ತು ಜಾಬ್ ಚಾರ್ಟ್ ಪ್ರಕಾರ ಅನುಪಾಲನ ವರದಿ ಬಂದಿರುವುದಿಲ್ಲವೊ) ಅಂತವರ ವೇತನವನ್ನು ಕಡತ ಮಾಡಲು ಹಾಗೂ ಬ್ರೀಮ್ಸ್ ಬೀದರ ನಿರ್ದೇಶಕರ ಮೇಲೆ ಕ್ರಮಕೈಗೊಳ್ಳುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ
(ವೈದ್ಯಕೀಯ ಶಿಕ್ಷಣ)

**ಕಾರ್ಯಸೂಚಿ-12: ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 100 ಎಂ.ಬಿ.ಬಿ.ಎಸ್. ಸೀಟುಗಳಿಂದ 150 ಸೀಟುಗಳಿಗೆ ಪ್ರವೇಶಾವಕಾಶ ಹೆಚ್ಚಿಸುವ ಕುರಿತು.**

ತೀರ್ಮಾನ: ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಈಗಾಗಲೇ 100 ಎಂ.ಬಿ.ಬಿ.ಎಸ್. ಸೀಟುಗಳಿಗೆ ಪ್ರವೇಶಾವಕಾಶ ಇರುವುದರಿಂದ 150 ಸೀಟುಗಳಿಗೆ ಪ್ರವೇಶಾವಕಾಶ ಹೆಚ್ಚಿಸುವ ಬದಲು ಪ್ರೀ ಮತ್ತು ಪ್ಯಾರಾ ಕ್ಲೀನಿಕಲ್ ವಿಭಾಗಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪಡೆಯುವಂತೆ ಸಭೆಯು ತೀರ್ಮಾನಿಸಿತು.

**ಕಾರ್ಯಸೂಚಿ-13: ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧಕ ಆಸ್ಪತ್ರೆ ಬೀದರನಲ್ಲಿ ಪೌಷ್ಟಿಕ ಪುನರ ವಸತಿ ಕೇಂದ್ರ/ ಘಟಕ (Nutritional Rehabilitation Centre) ಸ್ಥಾಪಿಸುವ ಕುರಿತು.**

ತೀರ್ಮಾನ: ದಿನಾಂಕ: 24-04-2012ರಂದು ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ.ಎನ್.ಕೆ.ಪಾಟೀಲ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು (Karnataka High Court, Bangalore) ಹಾಗೂ ರಾಜ್ಯ ಮಟ್ಟದ ಅಪೌಷ್ಟಿಕತೆ ಸಮಿತಿಯ ಅಧ್ಯಕ್ಷರು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ಬೀದರ ಇವರೊಂದಿಗೆ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧಕ ಆಸ್ಪತ್ರೆಗೆ ಭೇಟಿ ನೀಡಿದ ಸಂಧರ್ಭದಲ್ಲಿ ತಾಯಿ ಮತ್ತು ಮಕ್ಕಳ ಹಿತದೃಷ್ಟಿಯಿಂದ ತುರ್ತಾಗಿ ಒಂದು ಪೌಷ್ಟಿಕ ಪುನರವಸತಿ ಕೇಂದ್ರ/ ಘಟಕ (Nutritional Rehabilitation Centre) ಸ್ಥಾಪಿಸಲು ಸೂಚಿಸಿದಂತೆ ಹಾಗೂ ಗೌರವಾನ್ವಿತ ನ್ಯಾಯಮೂರ್ತಿಗಳ ನಿರ್ದೇಶನದ ಮೇರೆಗೆ ಕೇಂದ್ರ ಸರಕಾರದ ಮಾರ್ಗಸೂಚಿ ಅನುಸಾರ ಪೌಷ್ಟಿಕ ಪುನರವಸತಿ ಕೇಂದ್ರ / ಘಟಕ್ಕಕೆ ಬೇಕಾಗುವ ಜಾಗ (ಹತ್ತು ಹಾಸಿಗೆಗೆ – 1950 ಚದರ ಅಡಿ ಮತು 20 ಹಾಸಿಗೆ 3900 ಚದರ ಅಡಿ) ಸ್ಥಲಾವಕಾಸದಲ್ಲಿ ವೈದ್ಯಕೀಯ ಅಧೀಕ್ಷಕರು/ ಜಿಲ್ಲಾ ಶಸ್ತ್ರಚಿಕಿತ್ಸಕರ ಕಛೇರಿಗೆ ಹೊಂದಿಕೊಂದಿಕೊಂಡಿರುವ ಕಛೇರಿಯನ್ನು ಪೌಷ್ಟಿಕ ಪುನರವಸತಿ ಕೇಂದ್ರ/ ಘಟಕ ಪರಿವರ್ತಿಸಲು ಗುರುತಿಸಿರುತ್ತಾರೆ. ಗುರುತಿಸಿರುವ ಕಛೇರಿಯನ್ನು ನವ ಚೈತನ್ಯವನ್ನಾಗಿ ನಿರ್ಮಾಣ ಮಾಡಲು ಕಾರ್ಯನಿರ್ವಾಹಕ ಅಭಿಯಂತಕರು ಲೋಕೋಪೋಗಿ ಇಲಾಖೆ, ಬೀದರ ಇವರಿಗೆ ಪತ್ರ ಬರೆದು ಸದರಿ ನಿರ್ಮಾಣದ ಕಾರ್ಯಕ್ಕಾಗಿ ತಗಲುವ ಅಂದಾಜು ವೆಚ್ಚದ ಪಟ್ಟಿಯನ್ನು ಸಿದ್ದಪಡಿಸಿ ಈ ಕಾರ್ಯಲಯಕ್ಕೆ ಸಲ್ಲಿಸಲು ಕೋರಲಾಗಿದೆಂದು ಸಭೆಯಲ್ಲಿ ಮಂಡಿಸಲಾಗಿ ಸಭೆಯು ಸರ್ವಾನುಮತದಿಂದ ಪೌಷ್ಟಿಕ ಪುನರ ವಸತಿ ಕೇಂದ್ರ/ ಘಟಕ (Nutritional Rehabilitation Centre) ಸ್ಥಾಪಿಸಲು ಸಭೆಯು ಅನುಮೋದನೆ ನೀಡುತ್ತಾ ಸದರಿ ಕೇಂದ್ರಕ್ಕೆ ತಗಲುವ ವೆಚ್ಚವನ್ನು ಸರ್ಕಾರದ Grant in Aid / User charges ಮತ್ತು ಹಚ್.ಕೆ.ಡಿ.ಬಿ.(HKDB) ಗುಲ್ಬರ್ಗಾದಿಂದ ಹಣ ಪಡೆಯಲು ಕ್ರಮ ತಗೆದುಕೊಳ್ಳಲು ನಿರ್ದೇಶಕರಿಗೆ ಸಭೆಯು ಸೂಚಿಸಿತು.

ಕೆ.ಹೆಚ್. ಗೋಪಾಲಕೃಷ್ಣ ಗೌಡ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

**<u>ಕಾರ್ಯಸೂಚಿ-14:</u> ಬೀದರ ವೈದ್ಯಕೀಯ ಸಂಸ್ಥೆ ಬೋಧಕ ಆಸ್ಪತ್ರೆಯನ್ನು ಹೊಸ ಚೈತನ್ಯ (Renovation) / ದುರಸ್ತಿ(Repair) / ಮಾರ್ಪಾದು (Modification) ಪೆಟಿಂಗ್/ ಬಣ್ಣ ಬಳಿಸುವ (Colouring) ಕ್ರಮ ಕೈಗೊಳ್ಳುವ ಬಗ್ಗೆ.**

**<u>ತೀರ್ಮಾನ:</u>** ಬೀದರ ವೈದ್ಯಕೀಯ ಸಂಸ್ಥೆ ಬೋಧಕ ಆಸ್ಪತ್ರೆಯನ್ನು ಹೊಸ ಚೈತನ್ಯ (Renovation) / ದುರಸ್ತಿ(Repair) / ಮಾರ್ಪಾಡು (Modification) ಪೆಟಿಂಗ್/ ಬಣ್ಣ ಬಳಿಸುವ (Colouring) ಕ್ರಮಕೈಗೊಳ್ಳುವುದಾಗಿ ತಿಳಿಸುತ್ತಾ ದಿನಾಂಕಃ 24-04-2012 ರಂದು ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಎನ್.ಕೆ. ಪಾಟೀಲ್ ಕರ್ನಾಟಕ ಉನ್ನತ ನ್ಯಾಯಾಲಯ ಬೆಂಗಳೂರು (Karnataka High Court Bangalore) ಹಾಗೂ ರಾಜ್ಯ ಮಟ್ಟದ ಅಪೌಷ್ಠಿಕತೆ ಸಮಿತಿಯ ಅಧ್ಯಕ್ಷರು ಆದ ಇವರು ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧಕ ಆಸ್ಪತ್ರೆ ಬೀದರಗೆ ಭೇಟಿ ನೀಡಿ ಆಸ್ಪತ್ರೆಯ ವಾರ್ಡಗಳಲಾದ ಎಂ.ಐ.ಸಿ.ಯು., ಸಿ.ಸಿ.ಯು, ಡಯಾಲೈಸಿಸ್ ಮಕ್ಕಳ ಹೊರರೋಗಿ ವಿಭಾಗ ಮುಂತಾದವುಗಳನ್ನು ಅವಲೋಕಿಸಿ, ಅಸಂತೋಷ ವ್ಯಕ್ತ ಪಡಿಸಿರುತ್ತಾರೆ. ಸದರಿ ಆಸ್ಪತ್ರೆಗೆ ಹೊಸ ಚೈತನ್ಯ (Renovation)/ ದುರುಸ್ತಿ (Repairs)/ ಮಾರ್ಪಾಡು (Modification)/ ಪೆಂಟಿಂಗ್/ಬಣ್ಣ (Colouring) ಬಳಿಸಲು ನಿರ್ದೇಶನವನ್ನು ನೀಡಿರುವ ಹಿನ್ನೆಯಲ್ಲಿ ಈ ಕಾರ್ಯಾಲಯದ ಪತ್ರ ಸಂಖ್ಯೆಃ BRIMS/DHB/Renovation/2012-13/193 ದಿನಾಂಕಃ 07-05-2012 ರಂತೆ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಬೀದರ ಇವರಲ್ಲಿ ಈ ಕುರಿತು ಕ್ರಮ ಕೈಕೊಳ್ಳಲು ಅಂದಾಜು ವೆಚ್ಚ ಪಟ್ಟಿಯನ್ನು ಸಿದ್ಧಪಡಿಸಿ ಈ ಕಾರ್ಯಾಲಯಕ್ಕೆ ನೀಡಲು ಕೋರಲಾಗಿದ್ದು ಮೇಲಿನಂತೆ ಕ್ರಮಕೈಗೊಳ್ಳಲು ಸಭೆಯಲ್ಲಿ ಮಂಡಿಸಿದಾಗ ಸಭೆಯು ಸರ್ವಾನುಮತದಿಂದ ಮೇಲಿನ ಕ್ರಮಕೈಗೊಳ್ಳಲು ಒಪ್ಪಿಗೆ ನೀಡುತ್ತಾ ಸದರಿ ಕೆಲಸಕ್ಕಾಗಿ ತಗಲುವ ವೆಚ್ಚವನ್ನು ಹೆಚ್.ಕೆ.ಡಿ.ಪಿ. ಅನುದಾನದಿಂದ ಬರಿಸಲು ಸಭೆಯು ಒಪ್ಪಗೆ ನೀಡಿತು ಮತ್ತು ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧಕ ಆಸ್ಪತ್ರೆಯನ್ನು ಸಂಪೂರ್ಣವಾಗಿ ಬಣ್ಣ ಬಳಿಸಲು (White wash) ಕ್ರಮ ಕೈಗೊಳ್ಳಲು ತಿಳಿಸುತ್ತಾ. ಇದಕ್ಕೆ ತಗಲುವ ವೆಚ್ಚವನ್ನು ಹೆಚ್.ಕೆ.ಡಿ.ಬಿ.ಗುಲ್ಬರ್ಗಾ ಇವರಿಂದ ಅನುದಾನ / ಸರ್ಕಾರದ Grant in Aid / User charges ನಿಂದ ಬರಿಸಲು ಸಭೆಯು ಸರ್ವಾನುಮತದಿಂದ ತೀನರ್ಮಾನಿಸಲಾಯಿತು.

**<u>ಕಾರ್ಯಸೂಚಿ-15:</u> ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧಕ ಆಸ್ಪತ್ರೆಯಲ್ಲಿ ಹಾಲಿ ಇರುವ 300 ಹಾಸಿಗೆ ಆಸ್ಪತ್ರೆಗೆ 30 ಹಾಸಿಗೆಗಳ ಎರಡು (ಪ್ರಸೂತಿ ಗೃಹ ಹಾಗೂ ಮಕ್ಕಳ ವಾರ್ಡು) ವಾರ್ಡುಗಳನ್ನು ನಿರ್ಮಿಸುವುದು ಹಾಗೂ ಒಂದು ಸುಸಜ್ಜಿತ ಕಾರ್ಡಿಯಾಕ ಅಂಬುಲೇನ್ಸ್ (well equipped cardiac Ambulance) ಒದಗಿಸುವುದು.**

**<u>ತೀರ್ಮಾನ:</u>** ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧಕ ಆಸ್ಪತ್ರೆಯಲ್ಲಿ ಹಾಲಿ ಇರುವ 300 ಹಾಸಿಗೆ ಆಸ್ಪತ್ರೆಗೆ 30 ಹಾಸಿಗೆಗಳ ಎರಡು (ಪ್ರಸುತಿ ಗೃಹ ಹಾಗೂ ಮಕ್ಕಳ ವಾರ್ಡು) ವಾರ್ಡುಗಳನ್ನು ನಿರ್ಮಿಸುವುದು ಹಾಗೂ ಒಂದು ಸುಸಜ್ಜಿತ ಕಾರ್ಡಿಯಾಕ ಅಂಬುಲೇನ್ಸ್ (well equipped cardiac Ambulance) ಒದಗಿಸುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸುತ್ತಾ.

ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧಕ ಆಸ್ಪತ್ರೆಯ ಹಾಲಿ ಕಟ್ಟಡವು 300 ಹಾಸಿಗೆಯುಳ್ಳ ಸಾಮರ್ಥವನ್ನು ಹೊಂದಿದ್ದು ಅದರಲ್ಲಿ 60 ಹಾಸಿಗೆ ಪ್ರಸೂತಿ ವಾರ್ಡು ಹಾಗೂ 60 ಹಾಸಿಗೆಯ ಮಕ್ಕಳ ವಾರ್ಡು ಹೊಂದಿದ್ದು ಸದ್ಯದ ಸ್ಥಿತಿಯಲ್ಲಿ ಈ ಎರಡು ವಾರ್ಡುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಒಳರೋಗಿಗಳು ಪ್ರವೇಶ ಪಡೆಯುತ್ತಿದ್ದು ಸ್ಥಳವಕಾಶದ ಕೊರತೆಯಿಂದಾಗಿ ರೋಗಿಗಳನ್ನು ನೆಲದ ಹಾಸಿಗೆಯ ಮೇಲೆ ಅವಕಾಶ ಮಾಡಲಾಗುತ್ತಿದ್ದು ಇದರಿಂದಾಗಿ ಸಾರ್ವಜನಿಕರಿಂದ ಹೆಚ್ಚಿನ ಪ್ರಮಾಣದಲ್ಲಿ ದೂರುಗಳು ಬರುತ್ತಿವೆ.

ಮಾನ್ಯ ಜಿಲ್ಲಾಧಿಕಾರಿಗಳು ಬೀದರ ಇವರು ಈ ಸಮಸ್ಯೆಯನ್ನು ಮನಗಂಡು ಆಸ್ಪತ್ರೆಯ ಹೆರಿಗೆ ವಾರ್ಡಿನ ಮತ್ತು ಮಕ್ಕಳ ವಾರ್ಡಿನ ಮಧ್ಯದಲ್ಲಿನ ಖಾಲಿ ಇರುವ (ಉದ್ಯಾನ) ಜಾಗದಲ್ಲಿ 30 ಹಾಸಿಗೆಯುಳ್ಳ ಪ್ರಸುತಿ ಗೃಹ ಹಾಗೂ 30 ಹಾಸಿಗೆಯುಳ್ಳ ಮಕ್ಕಳ ವಾರ್ಡಿನ ಕಟ್ಟಡವನ್ನು ನಿರ್ಮಿಸಬಹುದು ಮತ್ತು ಚಿಂತಾಜನಕ ರೋಗಿಗಳನ್ನು (serious patients) ಹಾಗೂ ತುರ್ತು ರೋಗಿಗಳನ್ನು (Emergency patients) ಸ್ಥಳಾಂತರಿಸುವ (Shifting) ಕೋಸ್ಕರ್ ಒಂದು ಸುಸಜ್ಜಿತ ಕಾರ್ಡಿಯಾಕ ಅಂಬುಲೇನ್ಸ್ **(well equipped cardiac Ambulance)** ಅವಶ್ಯಕವಾಗಿರುತ್ತದೆ. ದಿನಾಂಕ: 03-12-2011ರಂದು ಮಾನ್ಯ ಮುಖ್ಯ ಮಂತ್ರಿಯವರು ಬೀದರ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಂದರ್ಬದಲ್ಲಿ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ, ಅಭಿವೃದ್ಧಿಗೆ ಮತ್ತು ಅಂಬುಲೇನ್ಸ್ ಖರೀದಿಗಾಗಿ ಅನುದಾನ ಬಿಡುಗಡೆಗಾಗಿ ಸಲ್ಲಿಸಿದ ಮನವಿಯ ಮೇರೆ ಮಾನ್ಯ ಮುಖ್ಯ ಮಂತ್ರಿಯವರು ಕೂಡಲೇ ಸೂಕ್ತ ಕ್ರಮಕೈಗೊಳ್ಳುವಂತೆ ತಿಳಿಸಿರುತ್ತಾರೆ. ಅದರಂತೆ ಸರಕಾರದ ಪ್ರಧಾನ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷನ0 ವಿಧಾನ ಸೌಧ, ಬೆಂಗಳೂರು ಇವರು ಸದರಿ ವಿಷಯವನ್ನು ಪರಿಸೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ತಿಳಿಸಿರುವ ಪ್ರಯುಕ್ತ ಈ ಕಾರ್ಯಲಯದ ಪತ್ರ ಸಂಖ್ಯೆ:ಬ್ರೀಮ್ಸ್/ಆಡಳಿತ/2105/2011-12 ದಿನಾಂಕ:20-03-2012ರಂದು ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ ಬೆಂಗಳೂರು ಇವರು ಈ ಕುರಿತು ಕ್ರಮಕೈಗೊಳ್ಳ ಕೊರಲಾಗಿದೆ.

ಪ್ರಯುಕ್ತ 30 ಹಾಸಿಗೆಯುಳ್ಳ ಎರಡು ವಾರ್ಡುಗಳನ್ನು ಖಾಲಿ ಸ್ಥಳದಲ್ಲಿ ನಿರ್ಮಿಸಲು ಹಾಗೂ ರೋಗಿಗಳ ಹಿತದೃಷ್ಠಿಯಿಂದ ಒಂದು ಸುಸಜ್ಜಿತ ಕಾರ್ಡಿಯಾಕ ಅಂಬುಲೇನ್ಸ್ **(well equipped cardiac Ambulance) DGS&D** ಯಿಂದ ಪಡೆಯಲು ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದಾಗ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡುತ್ತಾ ಸದರಿ ವೆಚ್ಚವನ್ನು ಹೆಚ್.ಕೆ.ಡಿ.ಬಿ. ಅನುದಾನದಿಂದ ಬಳಿಸಲು ಸಭೆಯು ತೀರ್ಮಾನಿಸಲಾಯಿತು.

**ಕಾರ್ಯಸೂಚಿ-16:** ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಪಕರುಗಲಿಗೆ ಫೀಟ್‌ಮೆಂಟ್ ವೇತನ ಶ್ರೇಣಿ ನೀಡುವ ಬಗ್ಗೆ.

ಕೆ.ಹೆಚ್. ಗೋಪಾಲಕೃಷ್ಣೇ ಗೌಡ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

__ತೀರ್ಮಾನ:__ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಪಕರುಗಳಿಗೆ ಫೀಟ್‌ಮೆಂಟ್ ವೇತನ ಶ್ರೇಣಿ ನೀಡುವಂತೆ ಸಭೆಯಲ್ಲಿ ಮಂಡಿಸಿದಾಗ ಒಂದೇ ಹುದ್ದೆಗೆ ಸಂಸ್ಥೆಯಿಂದ ಸಂಸ್ಥೆಗೆ ಎರಡು ತರಹದ ವೇತನ ಇರುವುದಿಲ್ಲವೆಂದು ತಿಳಿಸುತ್ತಾ ಈ ಸಂಬಂಧ ಸರ್ಕಾರದಿಂದ ಮಾರ್ಗಸೂಚಿ ಹೊರಡಿಸಲಾಗುವುದೆಮದು ಸಭೆಯು ತೀರ್ಮಾನಿಸಲಾಯಿತು.

**__ಕಾರ್ಯಸೂಚಿ-17:__ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಟ್ಯೂಟರ್‌ಗಳನ್ನು ಖಾಯಂಗೊಳಿಸುವ ಬಗ್ಗೆ**

__ತೀರ್ಮಾನ:__ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಟ್ಯೂಟರ್‌ಗಳನ್ನು ಖಾಯಂಗೊಳಿಸಬೇಕೆಂದು ಸಭೆಯಲ್ಲಿ ಮಂಡಿಸಲಾಗಿ ಸಭೆಯು ಖಾಯಂಗೊಳ್ಳಿಸಲು ಬರುವುದಿಲ್ಲವೆಂದು ಸಾರ್ವನುಮತದಿಂದ ತೀರ್ಮಾನಿಸಲಾಯಿತು.

**__ಕಾರ್ಯಸೂಚಿ-18:__ ಶ್ರೀ.ಬಸವರಾಜ ಅರ್ಥಮ ಇವರಿಗೆ ಫೀಜಿಯೋಥೇರಾಪಿಸ್ಟ್ (Physiotherapist) ಹುದ್ದೆಗೆ ನೇಮಕಾತಿಮಾಡಿಕೊಂಡಿದಕ್ಕೆ ಅನುಮೋದನೆ ನೀಡುವ ಬಗ್ಗೆ.**

__ತೀರ್ಮಾನ:__ ಶ್ರೀ.ಬಸವರಾಜ ಅರ್ಥಮ ಇವರಿಗೆ ಫೀಜಿಯೋಥೇರಾಪಿಸ್ಟ್ (Physiotherapist) ಹುದ್ದೆಗೆ ನೇಮಕಾತಿಮಾಡಿಕೊಂಡಿದಕ್ಕೆ ಅನುಮೋದನೆ ನೀಡಲು ಸಭೆಯಲ್ಲಿ ಮಂಡಿಸಿದಾಗ ಪ್ರಕಟಣೆ ಹೊರಡಿಸಿ ಪ್ರಕಟಣೆ ಮೂಲಕ ನೇಮಕಾತಿ ಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು.

**__ಕಾರ್ಯಸೂಚಿ-19:__** ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ "ಡಿ" ದರ್ಜೆ ನೌಕರರು/ ಸ್ವಿಪರ್ ಹಾಗೂ ಅಟೆಂಡರಾಗಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಖಾಯಂಗೊಳಿಸುವ ಕುರಿತು.

__ತೀರ್ಮಾನ:__ ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ "ಡಿ" ದರ್ಜೆ ನೌಕರರು/ ಸ್ವಿಪರ್ ಹಾಗೂ ಅಟೆಂಡರಾಗಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಖಾಯಂಗೊಳಿಸುವಂತೆ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದಾಗ ಹೊರ ಗುತ್ತಿಗೆ ಆಧಾರದ ಮೇಲೆ "ಡಿ" ದರ್ಜೆ ನೌಕರರು/ ಸ್ವಿಪರ್ ಹಾಗೂ ಅಟೆಂಡರಾಗಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಖಾಯಂ ಗೊಳಿಸಲು ಬರುವುದಿಲ್ಲ. ಇದಕ್ಕೆ ಯಾವುದೇ provision ಇರುವುದಿಲ್ಲವೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಮುಂದುವರೆದು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಸಿ ಮತ್ತು ಡಿ ನೌಕರರಿಗೆ ಹೊಸ 6ನೇ ವೇತನ ಪರಿಷ್ಕೃತ ವೇತನದಂತೆ ಮೂಲ ವೇತನದ ಶೇ: 75%ರಂತೆ ಪಿ.ಎಫ್.ಸೇರಿದಂತೆ ದಿನಾಂಕ: 01-05-2012ರಿಂದ ಜಾರಿಗೆ ಬರುವಂತೆ ವೇತನ ನೀಡಬಹುದೆಂದು ಸಭೆಯು ತೀರ್ಮಾನಿಸಲಾಯಿತು.

ಕೆ.ಹೆಚ್.ಗೋಪಾಲಕೃಷ್ಣೇ ಗೌಡ
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಮತ್ತು ಇನ್ನುಮುಂದೆ ಬೋಧಕೇತರ ಸಿಬ್ಬಂಧಿಗಳನ್ನು ನೇಮಕಾತಿ ಮಾಡಿಕೊಳ್ಳಲು ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗದಲ್ಲಿ ನೇಮಕಾತಿ ಮಾಡಿದ ವಿಧಾನಗಳನ್ನು ಈ ಸಂಸ್ಥೆಗೆ ಅಳವಡಿಸಿಕೊಳ್ಳುವಂತೆ ಸಭೆಯು ಸವಾನುಮತದಿಂದ ಒಪ್ಪಿಗೆ ನೀಡಿತು.

**ಕಾರ್ಯಸೂಚಿ-20: ಭಾರತೀಯ ವೈದ್ಯಕೀಯ ಪರಿಷತ್ತ ನಿಯಾಮವಳಿಗಳ ಪ್ರಕಾರ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಬೋಧಕ ಹಾಗೂ ಬೋಧಕೇತರ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ.**

**ತೀರ್ಮಾನ:** ಭಾರತೀಯ ವೈದ್ಯಕೀಯ ಪರಿಷತ್ತ ನಿಯಾಮವಳಿಗಳ ಪ್ರಕಾರ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಬೋಧಕ ಹಾಗೂ ಬೋಧಕೇತರ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸುವಂತೆ ಸಭೆಯಲ್ಲಿ ಮಂಡಿಸಿದಾಗ ಸಭೆಯು ಈ ಪ್ರಸ್ತಾವನತೆಯನ್ನು ಸರ್ಕಾರಕ್ಕೆ ಸಲ್ಲಿಸಿ ಫಾಲೋಹಪ್ ಮಾಡಲು ಸಭೆಯ ತೀರ್ಮಾನಿಸಲಾಯಿತು.

**ಕಾರ್ಯಸೂಚಿ-21:**

PERMISSION FOR STARTING POSTGRADUATE COURSES IN CLINICAL SUBJECTS/ DEPARTMENTS AND FOR POSTGRADUATE COURSES WHICH ARE NOT PERMITTED IN PRE AND PARA CLINICAL DEPARTMENT.

**ತೀರ್ಮಾನ:** ಪ್ರೀ ಮತ್ತು ಪ್ಯಾರಾ ಕ್ಲೀನಿಕಲ್ ವಿಭಾಗಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಿದಕ್ಕೆ ಅನುಮತಿ ನೀಡುತಾ ಕ್ಲೀನಿಕಲ್ ವಿಭಾಗಗಳಲ್ಲಿ ಸ್ನಾತಕೊತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಬೇಕಾಗುವ ಮೂಲಭೂತ ಸೌಕರ್ಯಗಳಾದ ಸುಸಜಿತ ಬೋಧಕ ಆಸ್ಪತ್ರೆ ಸ್ಥಳಾವಕಾಶ ಘಟಕಗಳ / ಯೂನಿಟ್ ಲಭ್ಯತೆ ಮತ್ತು ಬೋಧಕ ಸಿಬ್ಬಂಧಿಗಳು ಹಾಗೂ ಉಪಕರಣಗಳ ಲಭ್ಯತೆ ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. ಸದಸ್ಯಕ್ಕೆ ಕ್ಲಿನಿಕಲ್ ವಿಭಾಗಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸುವುದು ಸೂಕ್ತವಲ್ಲವೆಂದು ತೀರ್ಮಾನಿಸಲಾಯಿತು.

ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷರ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ.ಕೆ.ಹೆಚ್.ಗೋಪಾಲಕೃಷ್ಣ ಗೌಡ,ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ),
ಬೆಂಗಳೂರು.
**ಕೆ.ಹೆಚ್. ಗೋಪಾಲಕೃಷ್ಣ ಗೌಡ,**
**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**
**(ವೈದ್ಯಕೀಯ ಶಿಕ್ಷಣ)**

ಶ್ರೀ.ಎಸ್.ಎ.ರಾಮದಾಸ್
ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು
ಹಾಗೂ ಬೀ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ
ಗೌರವಾನ್ವಿತ ಅಧ್ಯಕ್ಷರು.
**(ಎಸ್.ಎ. ರಾಮದಾಸ್)**
**ವೈದ್ಯಕೀಯ ಶಿಕ್ಷಣ ಸಚಿವರು**